ದಯವಿಟ್ಟು ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಬೇಕು. ಇದರಲ್ಲಿ ಏನಾದರೂ ರಾಜಕೀಯ ಇದೆಯೇ? ಗುಂಪುಗಾರಿಕೆ ಇದೆಯೇ? ಇರತಕ್ಕಂಥ ಸತ್ಯವನ್ನು ಬಗೆಹರಿಸುವುದಕ್ಕೆ ಸರ್ಕಾರ ಏಕೆ ವಿಳಂಬ ಮಾಡುತ್ತಿದೆ? ದಯವಿಟ್ಟು ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು ಮಾನ್ಯ ಉಪಾಧ್ಯಕ್ಷರ ಮುಖೇನ ಸರ್ಕಾರಕ್ಕೆ ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ (ಬೃಹತ್ ನೀರಾವರಿ ಸಚಿವರು) :— ಉಪಾಧ್ಯಕ್ಷರೆ, ಮಾನ್ಯ ಪುಟ್ಟಣ್ಣಯ್ಯನವರು ಹೇಳಿರತಕ್ಕಂಥ ವಿಚಾರದ ಬಗ್ಗೆ ಈಗಾಗಲೇ ನಾವು ಒಂದು ಸಭೆ ನಡೆಸಿದ್ದೇವೆ. ಈ ಸಭೆಯಲ್ಲಿ ಮಾನ್ಯ ವೀರಪ್ಪ ಮೊಯಿಲಿ ಅವರು ಕೂಡ ಭಾಗವಹಿಸಿದ್ದರು, ಅವರು ಕೂಡ ನನಗೆ ದೂರವಾಣಿ ಮಾಡಿ ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳಿಗೆ ಸಮಯ ಇಲ್ಲದೆ ಇರುವುದರಿಂದ ಹಾಗೂ ಕಾರಣಾಂತರಗಳಿಂದ ಎರಡು ಸಾರಿ ದಿನಾಂಕ ನಿಗದಿಯಾಗಿದ್ದರೂ ಬಹಳ ಒತ್ತಡದ ಕಾರಣಕ್ಕೆ ಮುಂದಕ್ಕೆ ಹೋಗಿದೆ. ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿ ಕೂಡಲೇಸಭೆಯನ್ನು ಕರೆದು ಸಮಸ್ಯೆ ಬಗೆಹರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇದರಲ್ಲಿ ರಾಜಕೀಯ ಏನೂ ಇಲ್ಲ. ಬೇರೆ ಏನೂ ಇಲ್ಲ. ಎಲ್ಲಾ ಜನರ ಸಮಸ್ಯೆ ಆಗಿದೆ. ಮಾನ್ಯ ಮುಖ್ಯಮಂತ್ರಿಗಳು ಕೂಡ ಆ ಸಭೆಯಲ್ಲಿ ಭಾಗವಹಿಸುತ್ತಾರೆ ಇವರ ಜೊತೆಗೆ ಮಾನ್ಯ ಗೃಹಸಚಿವರು ಕೂಡ ಭಾಗವಹಿಸುತ್ತಾರೆ.

(ಆ) ಪುತ್ತೂರು ತಾಲ್ಲೂಕಿನ ಹೊಸ ಮಠ ಸೇತುವೆಯ ಕಾಮಗಾರಿಯಲ್ಲಿ ಅವ್ಯವಹಾರ.

ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) :— ಮಾನ್ಯ ಉಪಾಧ್ಯಕ್ಷರೆ, ಇತ್ತೀಚಿಗೆ ಎಲ್ಲಾ ಕಡೆ ಅವ್ಯವಹಾರಗಳು ನಡೆಯುತ್ತಿವೆ. ಪುತ್ತೂರು ತಾಲ್ಲೂಕಿನ ಹೊಸಮಠ ಎಂದು ಹೇಳುವಂತಹ ಜಾಗದಲ್ಲಿ ಕುಮಾರಧಾರ ಎನ್ನುವ ನದಿಯಲ್ಲಿ ಹೊಸಮಠ ಸೇತುವೆಯಲ್ಲಿ ಹತ್ತು ಲಕ್ಷ ರೂಪಾಯಿಗಳ ಅಂದಾಜಿನ ಹೂಳೆತ್ತುವ ಕಾಮಗಾರಿಯನ್ನು ಸರ್ಕಾರದವರು ಕೈಗೆತ್ತಿಕೊಂಡಿದ್ದಾರೆ. ಅಲ್ಲಿನ ಗುತ್ತಿಗೆದಾರರು ನಾಲ್ಕು ಲಕ್ಷ ರೂಪಾಯಿಗಳ ಕಾಮಗಾರಿ ಎಂದು ಹೇಳುತ್ತಾರೆ. ವಿಪರ್ಯಾಸದ ಸಂಗತಿ ಎಂದರೆ, ಇದರ ಟೆಂಡರನ್ನು ದಕ್ಷಿಣ ಕನ್ನಡ ಜಿಲ್ಲೆಯ ಯಾವುದೇ ಪತ್ರಿಕೆಗಳಲ್ಲಿ ಪ್ರಕಟಿಸದೆ, ತುಮಕೂರು ಜಿಲ್ಲೆಯ ಒಂದು ಸಣ್ಣ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ. ಮತ್ತೊಂದು ವಿಶೇಷತೆ ಎಂದರೆ, ನಾನು ಕೂಡ ಈ ಜಾಗಕ್ಕೆ ಭೇಟಿ ಕೊಟ್ಟಿದ್ದೇನೆ. ಆ ಜಾಗದಲ್ಲಿ ಹೂಳೆತ್ತಿ ಪುನಃ ಹೊಳೆಗೆ ಹಾಕುತ್ತಿದ್ದಾರೆ. ನಿಜವಾಗಿಯೂ ಯಾರಾದರೊಬ್ಬ ಮಾನ್ಯ ಮಂತ್ರಿಗಳು ಬಂದು ನೋಡಿದರೆ ಬಹಳ ಚೆನ್ನಾಗಿ ಇರುತ್ತದೆ. ತಕ್ಷಣವೇ ಇದನ್ನು ಪರಿಶೀಲನೆ ಮಾಡಬೇಕು, ಪರಿಶೀಲನೆ ಮಾಡಬೇಕಾದಂಥ ಸಂದರ್ಭದಲ್ಲಿ ಜೆಡ್‌ಪಿ ಸದಸ್ಯರು ಹಾಗೂ ಶಾಸಕರ ಸಮ್ಮುಖದಲ್ಲಿ ಪರಿಶೀಲನೆ ಮಾಡಬೇಕು. ಈಗಾಗಲೇ ಆಗಿರುವ ಕೆಲಸಕ್ಕೆ ಪರಿಶೀಲನೆ ಮಾಡದೇ ಯಾವುದೇ ಬಿಲ್‌ನ್ನು ಪೇಮೆಂಟ್ ಮಾಡಬಾರದು. ಈ ರೀತಿ ಅವ್ಯವಹಾರದಲ್ಲಿ ಯಾರ್ಯಾರು ಭಾಗಿಗಳಾಗಿದ್ದಾರೆ ಅವರೆಲ್ಲರ ಮೇಲೆ ಕೂಡಲೇ

ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ, ಯಾವ ಬಜೆಟ್‌ನಲ್ಲಿ ಎಷ್ಟು ಹಣ ಮಂಡನೆ ಮಾಡಿದರೂ ಪೂರ್ಣಪ್ರಮಾಣದಲ್ಲಿ ಅದು ಸಾರ್ವಜನಿಕರಿಗೆ ತರುವುದಕ್ಕೆ ಆಗುವುದಿಲ್ಲ. ಆದ್ದರಿಂದ, ಕೆಲಸ ಆಗದೇ ಇರತಕ್ಕಂಥ ಕಾಮಗಾರಿಗಳಿಗೆ ಯಾವುದೇ ರೀತಿಯ ಪೇಮೆಂಟ್ ಮಾಡಕೂಡದು ಎಂದು ಸಣ್ಣ ನೀರಾವರಿ ಇಲಾಖೆಯವರಿಗೆ ಸೂಚನೆ ಕೊಡಬೇಕೆಂದು ಸಂಬಂಧಪಟ್ಟ ಮಂತ್ರಿಗಳಿಗೆ ಆಗ್ರಹ ಪೂರ್ವಕವಾಗಿ ಒತ್ತಾಯ ಮಾಡುತ್ತೇನೆ. ಇದರ ಜೊತೆಗೆ ಈ ಕೂಡಲೇ ಅವ್ಯವಹಾರದ ಬಗ್ಗೆ ತನಿಖೆ ಮಾಡಬೇಕು.

ಶ್ರೀ ಸಿ. ಭೈರೇಗೌಡ (ಕೃಷಿ ಸಚಿವರು) :— ಸರ್ಕಾರ ಇದರ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುತ್ತದೆ.

ಶ್ರೀ ಡಿ.ವಿ. ಸದಾನಂದಗೌಡ :— ಪೇಮೆಂಟ್ ಬಗ್ಗೆ ಕೂಡ ಸೂಚನೆ ಕೊಟ್ಟುಬಿಡಿ. ಏಕೆಂದರೆ, ನಾನು ಇಲ್ಲಿ ಇದನ್ನು ಪ್ರಸ್ತಾಪ ಮಾಡುತ್ತೇನೆಂದು, ಬಿಲ್‌ಗಳನ್ನು ರೆಡಿಮಾಡಿ ಪೇಮೆಂಟ್‌ಗಾಗಿ ಕಳುಹಿಸಿರುವ ವಿಷಯ ನನಗೆ ಗೊತ್ತಾಗಿದೆ. ನಾನು ಈ ವಿಷಯವನ್ನು ಇಲ್ಲಿ ಪ್ರಶ್ನೆ ಮಾಡುತ್ತೇನೆಂದಾಕ್ಷಣವೇ ಅವರು ಬಿಲ್‌ಗಳನ್ನು ಕೊಡಬೇಕು ಎನ್ನುವುದಾದರೆ, ನಿಮ್ಮ ಅಧಿಕಾರಿಗಳಿಗೂ ಮತ್ತು ಆ ಗುತ್ತಿಗೆದಾರರಿಗೆ ಎಷ್ಟು ಕನೆಕ್ಷನ್ ಇದೆ ಎನ್ನುವುದನ್ನು ತಾವು ಆಲೋಚಿಸಬೇಕು. ತಕ್ಷಣ ಪೇಮೆಂಟ್ ತಡೆಯಬೇಕು ಹಾಗೂ ಇದರ ಬಗ್ಗೆ ತನಿಖೆ ಮಾಡಬೇಕು.

ಶ್ರೀ ಕೆ.ಎಸ್. ನಾಗೇಗೌಡ (ಬೃಹತ್ ನೀರಾವರಿ ಸಚಿವರು) :— ಉಪಾಧ್ಯಕ್ಷರೆ, ಕೂಡಲೇ ನಾನು ಕಾರ್ಯದರ್ಶಿಯವರಿಂದ ಮುಖ್ಯ ಅಭಿಯಂತರವರಿಗೆ ನಿರ್ದೇಶನಕೊಟ್ಟು ತನಿಖೆ ಮಾಡಿ ಎಂದು ಹೇಳುತ್ತೇನೆ. ಕೆಲಸ ಮಾಡಿದ್ದರೆ ಅವರು ಬಿಲ್ ಕೊಡುತ್ತಾರೆ, ಕೆಲಸ ಮಾಡಿಲ್ಲದಿದ್ದರೆ ಅವರು ಬಿಲ್ ಕೊಡುವುದಿಲ್ಲ, ಒಂದು ಪಕ್ಷ ಬಿಲ್‌ನಲ್ಲಿ ಏನಾದರೂ ತಪ್ಪು ಮಾಡಿದ್ದರೆ ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ನಾನು ಆದೇಶ ಮಾಡುತ್ತೇವೆ.

(ಆ) ಕುಂದಾಪುರ ತಾಲ್ಲೂಕಿನ ಶಂಕರನಾರಾಯಣ ಪೋಲೀಸ್ ಠಾಣೆ ಕುರಿತು.

+ ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ (ಕುಂದಾಪುರ) :— ಮಾನ್ಯ ಉಪಾಧ್ಯಕ್ಷರೆ, ನನ್ನ ಮತಕ್ಷೇತ್ರದಲ್ಲಿ ಶಂಕರನಾರಾಯಣ ಪೋಲೀಸ್ ಠಾಣೆ ಬರುತ್ತದೆ. ಈ ಪೋಲೀಸ್ ಠಾಣೆಗಳು ಆಗಬಾರದು ಆದರಂತೆ ಬಾರ್‌ಗಳೂ ಕೂಡ ಪೋಲೀಸ್ ಠಾಣೆ ಆಗಬಾರದು. ಏಕೆಂದರೆ ಕೆಲವು ಪೋಲೀಸ್ ಠಾಣೆಗಳಲ್ಲಿ ಅಲ್ಲಿಯೇ ಕುಡಿಯುವುದು, ಅಲ್ಲಿಯೇ ತಿನ್ನುವುದು ನಡೆಯುತ್ತಿದೆ. ಮತ್ತೆ ಕೆಲವು ಪೋಲೀಸ್‌ರವರು ಬಾರ್‌ಗಳಿಗೆ ಬಂದು ಅಲ್ಲಿಯೇ ಕುಡಿದು ಅಲ್ಲಿಯೇ ತೀರ್ಮಾನ ತೆಗೆದುಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಕುಡುಕರ ಅತಿರೇಕದಿಂದ ಏನಾಗುತ್ತದೆ ಎಂದರೆ, ಶಾಲೆಗಳಿಗೆ, ಪಂಚಾಯಿತಿ ಕಛೇರಿಗಳಿಗೆ ಹೋಗಿ ಅಲ್ಲಿ ಬಾಗಿಲು ಒಡೆದು ಹಾಕುತ್ತಿದ್ದಾರೆ. ಗಲಾಟೆ ಮಾಡುತ್ತಾರೆ, ಈ ಬಗ್ಗೆ ದೂರುಗಳೆಲ್ಲಾ